# ಮೊದಲನೇ ಅಪರ ಸಿವಿಲ್ ಜಡ್ಜ್ ಮತ್ತು ಜೆ.ಎಂ.ಎಫ್.ಸಿ. ರವರ ನ್ಯಾಯಾಲಯ,

# ಕನಕಪುರ.

## ಸಿಸಿ ನಂ.592/2008

ಪಿರ್ಯಾದುದಾರರು ಃ ಅಬಕಾರಿ ಪೊಲೀಸ್ ಠಾಣೆ

– ವಿರುದ್ಧ –

ಆರೋಪಿತರಾದ ಃ 1. ಶ್ರೀನಿವಾಸ ಬಿನ್ ಹನುಮಂತೇಗೌಡ
28 ವರ್ಷ
ಬನ್ನಳ್ಳಿ ಗ್ರಾಮ
ಕೋಡಿಹಳ್ಳಿ ಹೋಬಳಿ, ಕನಕಪುರ ತಾಲ್ಲೂಕು

:: **ದೋಷಾರೋಪಣೆ** ::

**ಶ್ರೀಮತಿ. ಲತಾಶ್ರೀ ಬಿ.ವಿ., ಬಿ.ಎ.ಎಲ್.,ಎಲ್.ಬಿ ಒಂದನೇ ಅಪರ ನ್ಯಾಯಿಕ ದಂಡಾಧಿಕಾರಿಗಳು, ಕನಕಪುರ, ಆದ ನಾನು ನಿಮ್ಮ ಮೇಲೆ ದೋಷಾರೋಪಣೆ ಏನೆಂದರೆಃ-**

ದಿನಾಂಕ:19.09.2005 ರಂದು ಬೆಳಿಗ್ಗೆ ಸುಮಾರು 9.15 ಗಂಟೆ ಸಮಯದಲ್ಲಿ ಮಾನ್ಯ ನ್ಯಾಯಾಲಯದ ವ್ಯಾಪ್ತಿಗೆ ಒಳಪಡುವ ಕೋಡಿಹಳ್ಳಿ ಹೋಬಳಿ ಬಿಜ್ಜಹಳ್ಳಿ, ತಾಂಡ್ಯ ಬಳಿ ಅಬಕಾರಿ ಉಪನಿರೀಕ್ಷಃಕರು 1, ಗಸ್ತು ಮಾಡುತ್ತಿದ್ದಾಗ 1ನೇ ಆರೋಪಿಯಾದ ನೀವು ಮೃತ 2ನೇ ಆರೋಪಿಯ ಜೊತೆ ಕೆಎ-04-ಇಇ-968 ಟಿ ವಿ ಎಸ್ ಎಕ್ಸಲ್ ಸೂಪರ್ ಹಾಗೂ ಕೆಎ-05-ವೈ-2092 ಟಿ ವಿ ಎಸ್ ಸೂಪರ್ ಚಾಂಪ್ ದ್ವಿಚಕ್ರ ವಾಹನಗಳಲ್ಲಿ ನಾಲ್ಲು ಬಿಳಿ ಬಣ್ಣದ ಪ್ಲಾಸ್ಟಿಕ್ ಕ್ಯಾನುಗಳಲ್ಲಿ ತಲಾ ಒಂದರಲ್ಲಿ ಸುಮಾರು 20 ಲೀಟರ್ ನಂತೆ ಒಟ್ಟು 80 ಲೀಟರ್ ಸೇಂದಿಯನ್ನು ಯಾವುದೇ ಪರವಾನಿಗೆ ಹೊಂದಿಲ್ಲದೇ ಅಕ್ರಮವಾಗಿ ಸಾಗಾಣಿಕೆ ಮಾಡುತ್ತಿದ್ದು , ಇದು ಕರ್ನಾಟಕ ಅಬಕಾರಿ ಕಾಯ್ದೆ 1965 ರ ಕಲಂ 11, 13(1) ಮತ್ತು 14 ರ ಪ್ರಕಾರ ಮತ್ತು 32(1), 34, 38(ಎ) ಮತ್ತು 43(ಎ) ರಡಿ ಶಿಕ್ಷಾರ್ಹ ಅಪರಾಧ ಮಾಡಿರುವಿರಿ.

ಸದರೀ ಅಪರಾಧಗಳು ಈ ನ್ಯಾಯಾಲಯದ ಸಂಜ್ಞೆಯಲ್ಲಿ ಬರುತ್ತವೆ ಮತ್ತು ಸದರಿ ವಿಚಾರಣೆಯು ನನ್ನ ಸಮಕ್ಷಮ ನಡೆಯಬೇಕೆಂದು ಈ ಮೂಲಕ ನಿರ್ದೇಶಿಸುತ್ತೇನೆ.

(ಈ ದೋಷಾರೋಪಣೆಯನ್ನು ಈ ದಿನ ದಿನಾಂಕಃ 09.01.2026 ರಂದು ಆರೋಪಿತರಿಗೆ ತೆರೆದ ನ್ಯಾಯಾಲಯದಲ್ಲಿ ಕನ್ನಡ ಭಾಷ್ಷೆಯಲ್ಲಿ ಓದಿ ಹೇಳಿ ಆತನ ಉತ್ತರವನ್ನು ಯಥಾವತ್ತಾಗಿ ದಾಖಲಿಸಿದೆ)

ಓ. ಹೇ. ಕೇ. ಸರಿ ಇದೆ.

ಒಂದನೇ ಅಪರ ಸಿವಿಲ್ ನ್ಯಾಯಾಧೀಶರು
ಮತ್ತು ಜೆಎಂಎಫ್ ಸಿ ಕನಕಪುರ

**1ನೇ <u>ಆರೋಪಿಯ ಹೇಳಿಕೆ</u>**

ಪ್ರಶ್ನೆ-1 ಇದೀಗ ಓದಿ ಹೇಳಿದ ದೋಷಾರೋಪಣೆ ನಿಮಗೆ ಅರ್ಥವಾಯಿತೇ?

ಉತ್ತರಃ-

ಪ್ರಶ್ನೆ-2 ನೀವು ನಿಮ್ಮ ತಪ್ಪನ್ನು ಒಪ್ಪಿಕೊಳ್ಳುವಿರಾ ಅಥವಾ ವಿಚಾರಣೆಯಾಗಬಯಸುವಿರಾ?

ಉತ್ತರಃ-

(ದಿನಾಂಕಃ 09.01.2026 ರಂದು ತೆರೆದ ನ್ಯಾಯಾಲಯದಲ್ಲಿ ಆರೋಪಿಗೆ ತಿಳಿಯುವ ಭಾಷೆಯಲ್ಲಿ ಆರೋಪವನ್ನು ಓದಿ, ತಿಳಿಸಿ ಹೇಳಿ, ಕೇಳಿ ಉತ್ತರವನ್ನು ಪಡೆಯಲಾಗಿದೆ ಎಂದು ಈ ಮೂಲಕ ದೃಡೀಕರಿಸಿದೆ.)

**ಮೊದಲನೇ ಅಪರ ಸಿಜೆ ಮತ್ತು ಜೆಎಂಎಫ್‌ಸಿ**
**ನ್ಯಾಯಾಲಯ, ಕನಕಪುರ**

ಆರೋಪಿಯ ಸಹಿ :